# ಕನ್ನಡ ಸಣ್ಣಕತೆಗಳಲ್ಲಿ ಆಧುನಿಕತೆಯ ಪ್ರವೇಶದಿಂದಾದ ಪರಿಣಾಮಗಳು

**ಸವಿತ ಜಿ.**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನರಸಿಂಹರಾಜಪುರ.

DOI: https://doi.org/10.5281/zenodo.17960056

## ABSTRACT:

ಕೈಗಾರಿಕಾ ಕ್ರಾಂತಿ ಮತ್ತು ಪಾಶ್ಚಾತ್ಯ ವಸಾಹತುಶಾಹಿಯ ಮೂಲಕ ಭಾರತವನ್ನು ಪ್ರವೇಶಿಸಿದ ಆಧುನಿಕತೆಯು (Modernity) ಕನ್ನಡ ಸಣ್ಣಕತೆಗಳ ಮೇಲೆ ಉಂಟುಮಾಡಿದ ಪರಿಣಾಮಗಳನ್ನು ಈ ಲೇಖನವು ವಿಶ್ಲೇಷಿಸುತ್ತದೆ. ಆಧುನಿಕ ಶಿಕ್ಷಣ, ಮುದ್ರಣ ಮತ್ತು ಹೊಸ ತಂತ್ರಜ್ಞಾನಗಳ ಆಗಮನವು ಪರಂಪರಾಗತವಾದ ಭಾರತೀಯ ಸಮಾಜ ಮತ್ತು ಮೌಲ್ಯಗಳೊಂದಿಗೆ ಸಂಘರ್ಷಕ್ಕೆ ಕಾರಣವಾಯಿತು.

ದೇವನೂರು ಮಹಾದೇವ ಅವರ 'ಡಾಂಬರು ಬಂದುದು' ಕತೆಯಲ್ಲಿ, ಶಿಕ್ಷಣವು ಯುವಜನರಿಗೆ ಆತ್ಮವಿಶ್ವಾಸ ಮತ್ತು ಭ್ರಷ್ಟಾಚಾರವನ್ನು ಪ್ರಶ್ನಿಸುವ ಧೈರ್ಯವನ್ನು ನೀಡಿದ್ದರೂ, ಪರಿಸರ ನಾಶದಂತಹ ಋಣಾತ್ಮಕ ಪರಿಣಾಮಗಳನ್ನು ಎತ್ತಿ ಹಿಡಿಯಲಾಗಿದೆ. ಪೂರ್ಣಚಂದ್ರ ತೇಜಸ್ವಿ ಅವರ 'ಅಬಚೂರಿನ ಪೋಸ್ಟಾಫೀಸು' ಕತೆಯಲ್ಲಿ, ಹೊಸ ಸಂಪರ್ಕ ಸಾಧನವಾದ ಪೋಸ್ಟಾಫೀಸು (ಅಂಚೆ ಕಛೇರಿ) ಹೇಗೆ ವ್ಯಕ್ತಿಯ ವೈಯಕ್ತಿಕ ನೆಮ್ಮದಿ ಮತ್ತು ಸಾಮಾಜಿಕ ಸಾಮರಸ್ಯವನ್ನು ಭಂಗಗೊಳಿಸಿ, ಹೊಸ ಸಂಕಟಗಳಿಗೆ ಕಾರಣವಾಯಿತು ಎಂಬುದನ್ನು ಪರಿಣಾಮಕಾರಿಯಾಗಿ ನಿರೂಪಿಸಲಾಗಿದೆ. ಒಟ್ಟಾರೆಯಾಗಿ, ಆಧುನಿಕತೆಯು ಸಮಾಜ ಮತ್ತು ಸಂಬಂಧಗಳ ಮೇಲೆ ಧನಾತ್ಮಕ ಮತ್ತು ಋಣಾತ್ಮಕ ಪರಿಣಾಮಗಳೆರಡನ್ನೂ ಬೀರಿದೆ ಎಂದು ಲೇಖನವು ತೀರ್ಮಾನಿಸುತ್ತದೆ.

## KEYWORDS:

ಕನ್ನಡ ಸಣ್ಣಕತೆಗಳು, ಆಧುನಿಕತೆ, ಸಾಮಾಜಿಕ ಪರಿಣಾಮ, ಡಾಂಬರು ಬಂದುದು, ಅಬಚೂರಿನ ಪೋಸ್ಟಾಫೀಸು.

ಆಧುನಿಕತೆಯ ಆರಂಭ 17-18 ನೇ ಶತಮಾನದಲ್ಲಿ ಯೂರೋಪಿನ ರಾಷ್ಟ್ರಗಳಲ್ಲಿ ಕೈಗಾರಿಕಾ ಕ್ರಾಂತಿಯ ನಂತರ ಆಯಿತು. ಕೈಗಾರಿಕಾ ಕ್ರಾಂತಿಗೂ ಮೊದಲು ಅಲ್ಲಿ ಧರ್ಮ ಅಂದರೆ ಚರ್ಚ್ ತನ್ನ ಹಿಡಿತವನ್ನು ಸಮಾಜದ ಮೇಲೆ ಹೊಂದಿತ್ತು ಮತ್ತು ಬಹಳಷ್ಟು ಪ್ರಭಾವಶಾಲಿಯಾಗಿತ್ತು. ಈ ಮೊದಲು ವಿಶ್ವಕ್ಕೆ ಭೂಮಿ ಕೇಂದ್ರ ಮತ್ತು ಭೂಮಿಯ ಮೇಲಿರುವ ಜೀವಸಂಕುಲಗಳನ್ನು ದೇವರು ಸೃಷ್ಟಿ ಮಾಡಿದ್ದಾನೆ ಎಂದು ನಂಬಿದ್ದರು. ಆದರೆ ಕೈಗಾರಿಕಾ ಕ್ರಾಂತಿಯ ನಂತರ ವಿಶ್ವಕ್ಕೆ ಭೂಮಿ ಕೇಂದ್ರವಲ್ಲ, ಸೂರ್ಯ ಕೇಂದ್ರ. ಭೂಮಿಯೇ ಸೂರ್ಯನ ಸುತ್ತ ತನ್ನ ಅಕ್ಷದಲ್ಲೆ ಸುತ್ತುತ್ತದೆ ಎಂಬ ವಿಚಾರವನ್ನು ಅನ್ವೇಷಿಸಲಾಯಿತು. ಜೀವಸಂಕುಲವನ್ನು ದೇವರು ಸೃಷ್ಟಿ ಮಾಡಿದ ಎಂಬ ನಂಬಿಕೆಯೂ ಡಾರ್ವಿನ್‌ನ ವಿಕಾಸವಾದವು ತಲೆಕೆಳಗು ಮಾಡಿತು. ಕೈಗಾರಿಕಾ ಕ್ರಾಂತಿಯ ಕಾರಣದಿಂದಾಗಿ ಕೈಗಾರಿಕಾ ಬಂಡವಾಳಶಾಹಿ ಪ್ರಬಲವಾಗಿ ಬೆಳೆಯಲು ಕಾರಣವಾಯಿತು. ವಿಜ್ಞಾನ ಮತ್ತು ತಂತ್ರಜ್ಞಾನ ಮುಂಚೂಣಿಗೆ ಬಂದಿತು, ಮತ್ತು ವಿಜ್ಞಾನ ಹೇಳುವ ಸತ್ಯವೇ ನಿಜವಾದ ಸತ್ಯ ಎಂಬ ನಂಬಿಕೆ ಬಲವಾಯಿತು ಇದು ಊಳಿಗಮಾನ್ಯಶಾಹಿಯ ಉತ್ಪಾದನಾ ವಿಧಾನಗಳು ಹಾಗೂ ಮೌಲ್ಯಗಳನ್ನು ಅನಾಗರಿಕ, ಹಳೆಯದು ಎಂದು ಅಪಹಾಸ್ಯ ಮಾಡಿತು.

ಆಧುನಿಕತೆ ಎಂಬುದು 19 ನೇ ಶತಮಾನದಲ್ಲಿ ಭಾರತದಲ್ಲಿ ಸಾಕಷ್ಟು ಬದಲಾವಣೆಗೆ ಕಾರಣವಾಯಿತು. ಬ್ರಿಟಿಷ್ ವಸಾಹತುಶಾಹಿಯ ಮೂಲಕ ಭಾರತವನ್ನು ಪ್ರವೇಶ ಮಾಡಿತು. ಬ್ರಿಟಿಷರು ತಮ್ಮ ಆಡಳಿತದ ಅನುಕೂಲಕ್ಕಾಗಿ ರೈಲು, ಅಂಚೆವ್ಯವಸ್ಥೆ, ಟೆಲಿಗ್ರಾಮ್, ಟೆಲಿಫೋನ್, ಮುದ್ರಣಯಂತ್ರ, ಶಿಕ್ಷಣ, ಕೈಗಾರಿಕೆಗಳು ಮುಂತಾದವುಗಳನ್ನು ಪ್ರಾರಂಭಿಸಿದರು. ಇದರಿಂದಾಗಿ ಭಾರತೀಯ ಸಮಾಜದಲ್ಲಿ ಕ್ರಮೇಣ ನಿಧಾನಗತಿಯಲ್ಲಿ ಬದಲಾವಣೆಗಳು ಪ್ರಾರಂಭವಾದವು. ಆಧುನಿಕತೆ ಪರಂಪರಾಗತವಾಗಿ ಬಂದ ನಮ್ಮ ಸಂಪ್ರದಾಯಬದ್ಧ ಸಮಾಜ ಮತ್ತು ಕೌಟುಂಬಿಕ ವ್ಯವಸ್ಥೆಯ ಮೇಲೆ ಬಹುವಾಗಿ ಪರಿಣಾಮವನ್ನು ಬೀರಿತು. ಪ್ರಾರಂಭದಲ್ಲಿ ಶತಶತಮಾನಗಳಿಂದ ಬಂದ ಪರಂಪರೆ ಮತ್ತು ಆಧುನಿಕತೆಯ ನಡುವೆ ಸಂಘರ್ಷವನ್ನು ಕಾಣುತ್ತೇವೆ. ಆಧುನಿಕತೆಯನ್ನು ಸ್ವೀಕರಿಸುವಾಗ ಹಿರಿಯ ತಲೆಮಾರು ಮತ್ತು ಕಿರಿಯ ತಲೆಮಾರಿನ ನಡುವೆ ಸಂಘರ್ಷವನ್ನು ಗುರುತಿಸುತ್ತೇವೆ.

ಬ್ರಿಟಿಷರಿಗೆ ತಮ್ಮ ಆಡಳಿತದ ಅನುಕೂಲಕ್ಕಾಗಿ ಕಾರಕೂನರೂ ಬೇಕಾಗಿದ್ದರು, ಅದಕ್ಕಾಗಿ ಇಂಗ್ಲಿಷ್ ಶಿಕ್ಷಣವನ್ನು ನೀಡಿದರು. ಶಿಕ್ಷಣ ಕೊಡುವ ಮೊದಲು ಯಾವ ಬಗೆಯ ಶಿಕ್ಷಣವನ್ನು ಕೊಡಬೇಕು ಎಂಬ ಪ್ರಶ್ನೆ ಎದುರಾಯಿತು. . ಮೆಕಾಲೆ ತನ್ನ ಕೃತಿಯಲ್ಲಿ ಭಾರತದಲ್ಲಿರುವ ಜ್ಞಾನ ಮರದ ಕಪಾಟಿನಲ್ಲಿ ಕೇವಲ ಒಂದು ಶೆಲ್ಫಿನಷ್ಟು ಮಾತ್ರ ಎನ್ನುತ್ತಾನೆ. ಏಕೆಂದರೆ ಅವನ ಪ್ರಕಾರ ಸಂಸ್ಕೃತದಲ್ಲಿರುವ ಶಾಸ್ತ್ರಗ್ರಂಥಗಳನ್ನು ಮಾತ್ರ ಜ್ಞಾನವೆಂದು ಪರಿಗಣಿಸುತ್ತಾರೆ. ಇವರು ಬಹಳ ಹಿಂದುಳಿದಿದ್ದಾರೆ. ಇವರಿಗೆ ಆಧುನಿಕ ಶಿಕ್ಷಣದ ಅವಶ್ಯಕತೆ ಇದೆ. ಎಂದು ತನ್ನ ಕೃತಿಯಲ್ಲಿ ದಾಖಲಿಸುತ್ತಾನೆ. ಇದನ್ನು ತಿಳಿಯದ ಕೆಲ ಭಾರತೀಯರು ಆಂಗ್ಲರಿಗೆ ತಮಗೆ ನಿಮ್ಮ ದೇಶದಲ್ಲಿರುವ ಆಧುನಿಕ ಇಂಗ್ಲೀಷ್ ಶಿಕ್ಷಣ ಬೇಕೆಂದು ಕೇಳಿದರು. ಆದರೆ ಭಾರತದಲ್ಲಿ ಈ ಮೊದಲು ಅತ್ಯುತ್ತಮವಾದ ಶಿಕ್ಷಣ ವ್ಯವಸ್ಥೆ ಇತ್ತು. ದೆಹಲಿಯಲ್ಲಿರುವ ಸ್ತೂಪ, ಬೇಲೂರಿನ ದೇವಾಲಯಗಳು, ಕೇರಳದ ಮಲಬಾರಿನಲ್ಲಿ ನಿರ್ಮಾಣಗೊಂಡ ಹಡಗುಗಳು ದೇಶ ವಿದೇಶಗಳಲ್ಲಿ ಸಂಚರಿಸುತ್ತಿದ್ದವು. ದೆಹಲಿಯ ಸ್ತೂಪ ನೂರಾರು ವರ್ಷಗಳಿಂದ ಗಾಳಿ, ಮಳೆ, ಬಿಸಿಲಿಗೆ ಒಡ್ಡಿಕೊಂಡು ನಿಂತಿದ್ದರೂ ತುಕ್ಕು ಹಿಡಿದಿಲ್ಲ. ಇವುಗಳ ನಿರ್ಮಾಣದಲ್ಲಿ ತೊಡಗಿಕೊಂಡ ಭಾರತೀಯರಿಗೆ ಲೋಹಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ ಮುಂತಾದ ವಿಷಯಗಳ ಜ್ಞಾನ ಇತ್ತು. ಇಂತಹ ಕೌಶಾಲ್ಯಾಧಾರಿತ ಶಿಕ್ಷಣವನ್ನು ಕಲಿಸಲಾಗುತ್ತಿತ್ತು. ಇಂತಹ ಶಾಲೆಗಳನ್ನು ಗಿಲ್ಡ್‌ಗಳೆಂದು ಕರೆಯುತ್ತಿದ್ದರು. ಈ ಗಿಲ್ಡ್‌ಗಳು ಇವತ್ತಿನ ಇಂಜಿನಿಯರ್ ಮಾದರಿಯ ಶಿಕ್ಷಣಕ್ಕೆ ಸಮಾನವಾಗಿದ್ದವು. ಆದರೆ ಈ ಬಗೆಯ ಶಿಕ್ಷಣವನ್ನು ಕಡೆಗಣಿಸಲಾಯಿತು. ನಮ್ಮಲ್ಲಿನ ಶಿಲ್ಪಶಾಸ್ತ್ರ, ಲೋಹಶಾಸ್ತ್ರ, ಗಣಿತಶಾಸ್ತ್ರ, ಹಡಗುಗಳ ನಿರ್ಮಾಣ ಕಲೆ ಮುಂತಾದವುಗಳನ್ನು ಶಿಕ್ಷಣವೆಂದು ಪರಿಗಣಿಸದೆ ತಾವು ನೀಡುವ ಶಿಕ್ಷಣವನ್ನು ಮಾತ್ರ ಅವರು ಆಧುನಿಕ ಶಿಕ್ಷಣವೆಂದು ಕರೆದರು. ಮತ್ತು ಆ ಶಿಕ್ಷಣವೇ ಶ್ರೇಷ್ಠ ಎಂದು ನಂಬಿಸಲಾಯಿತು. ಭಾರತೀಯರು ಹಿಂದುಳಿದಿದ್ದಾರೆ, ನಾವು ಅವರಿಗೆ ಆಧುನಿಕ ಶಿಕ್ಷಣವನ್ನು ನೀಡಬೇಕೆಂದು ತೀರ್ಮಾನಿಸಿ ಇಂಗ್ಲೀಷ್ ಮಾಧ್ಯಮದಲ್ಲಿ ನೀಡಲು ಪ್ರಾರಂಭಿಸಿದರು ಆಂಗ್ಲರು ತಾವು ಕೊಡುವ ಶಿಕ್ಷಣವೇ ಉನ್ನತವಾದುದು ಶ್ರೇಷ್ಠವಾದುದು ಎಂದು ಪರಿಗಣಿಸಿದರು. ಮೆಕಾಲೆ ಶಿಕ್ಷಣ ನೀತಿಯಂತೆ ಭಾರತದಲ್ಲಿ ಶಿಕ್ಷಣ ಕೊಡಲು ಪ್ರಾರಂಭಿಸಲಾಯಿತು.

ಭಾರತೀಯ ಸಮಾಜದಲ್ಲಿ ಶ್ರೇಣಿಕರಣ ವ್ಯವಸ್ಥೆ ಅಸ್ತಿತ್ವದಲ್ಲಿದ್ದೂ, ಎಲ್ಲರಿಗೂ ಶಿಕ್ಷಣ ಪಡೆಯುವ ಮುಕ್ತ ಅವಕಾಶವಿರಲಿಲ್ಲ. ಆದರೆ ಬ್ರಿಟಿಷರಿಂದಾಗಿ ಎಲ್ಲರಿಗೂ ಅವಕಾಶ ಲಭ್ಯವಾಯಿತು. ಆದರೆ ಮೊದಲು ಶಿಕ್ಷಣ ದಕ್ಕಿದ್ದೂ ಮೇಲ್ಜಾತಿ ಸಮುದಾಯಗಳಿಗೆ, ನಂತರ ಉಳಿದ ಜಾತಿ ಸಮುದಾಯಗಳಿಗೆ. ಆಧುನಿಕ ಶಿಕ್ಷಣ ಎಂದರೆ ಇಂಗ್ಲೀಷ್ ಮಾಧ್ಯಮದ

ಶಿಕ್ಷಣ ಎಂಬ ನಂಬಿಕೆ ಬೆಳೆದು ಬಂದಿದೆ. ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ಪಡೆದರೆ ಮಾತ್ರ ಯಶಸ್ಸು, ಉನ್ನತ ಉದ್ಯೋಗವನ್ನು ಪಡೆಯಲು ಸಾಧ್ಯ. ಸ್ಥಳೀಯ ಭಾಷೆಯಲ್ಲಿ ಅಂದರೆ ಕನ್ನಡ, ತಮಿಳು, ಬಂಗಾಳಿ, ಮರಾಠಿ ಮುಂತಾದ ಭಾಷೆಗಳಲ್ಲಿ ಶಿಕ್ಷಣ ಪಡೆದರೆ ಅದು ಶಿಕ್ಷಣವಲ್ಲ. ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ಪಡೆದರೆ ಅದು ಮಾತ್ರ ಜ್ಞಾನ ಎಂಬಂತಾಗಿದೆ. ಎಷ್ಟರಮಟ್ಟಿಗೆ ಎಂದರೆ ಬಡ ಮಧ್ಯಮವರ್ಗದ ತಂದೆ-ತಾಯಿಯರು ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮಕ್ಕೆ ಸೇರಿಸಲು ಆಸೆಪಡುತ್ತಾರೆ ಮತ್ತು ಅದಕ್ಕಾಗಿ ಶ್ರಮಿಸುತ್ತಾರೆ. ಅಲ್ಲದೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಯಾವ ಮಾಧ್ಯಮದಲ್ಲಿ ಕೊಡಬೇಕು. ಕನ್ನಡ ಮಾಧ್ಯಮದಲ್ಲಿ ಕೊಡಬೇಕೆ ಅಥವಾ ಇಂಗ್ಲೀಷ್ ಮಾಧ್ಯದಲ್ಲಿಯೇ ಎಂಬುದೆ ಬಹುದೊಡ್ಡ ಚರ್ಚೆಯಾಗಿದೆ. ಇಂಗ್ಲೀಷ್ ಭಾಷೆಯನ್ನು ಮಾತನಾಡಲು ಬರದೆ ಇರುವ ವಿದ್ಯಾರ್ಥಿಗಳು, ಪೋಷಕರು ಕೀಳರಿಮೆಯನ್ನು ಅನುಭವಿಸುವ ಪರಿಸ್ಥಿತಿ ಎದುರಾಗಿದೆ. ಇಂದು ಆಧುನಿಕತೆ ಬಹುದೊಡ್ಡ ಕೊಡುಗೆಯಾಗಿರುವ ಗಣಕಯಂತ್ರ ಮತ್ತಷ್ಟು ಕೀಳರಿಮೆಯನ್ನು ಬೆಳೆಸುತ್ತಿದೆ. ಇದು ಎಲ್ಲಿಯವರೆಗೆ ಮುಂದುವರೆದಿದೆ ಎಂದರೆ ಪ್ರಸ್ತುತ ಸಂದರ್ಭದಲ್ಲಿ ಕಂಪ್ಯೂಟರ್ ಬಳಸುವ ಜ್ಞಾನ ಇದ್ದರೆ ಮಾತ್ರ ಬುದ್ಧಿವಂತ ಜಾಣ, ಇಲ್ಲದಿದ್ದರೆ ದಡ್ಡ ಎಂದು ಗುರುತಿಸುವ ಮಟ್ಟಿಗೆ.

ಆಧುನಿಕತೆಯು ಭಾರತೀಯ ಕುಟುಂಬವ್ಯವಸ್ಥೆ ಮತ್ತು ಸಮಾಜದ ಮೇಲೆ ಬಹಳಷ್ಟು ಪರಿಣಾಮವನ್ನು ಬೀರಿದೆ. ಅದನ್ನು ಕನ್ನಡ ಸಣ್ಣಕತೆಗಳ ಮೂಲಕ ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಇದು ಕುಟುಂಬ ಮತ್ತು ಸಮಾಜಗಳ ಮೇಲೆ ಧನಾತ್ಮಕ ಮತ್ತು ಋಣಾತ್ಮಕ ಪರಿಣಾಮಗಳೆರಡನ್ನೂ ಮಾಡಿದೆ. ದೇವನೂರು ಮಹಾದೇವ ಅವರ 'ಡಾಂಬರು ಬಂದುದು' ಮತ್ತು ಪೂರ್ಣಚಂದ್ರ ತೇಜಸ್ವಿ ಅವರ 'ಅಬಚೂರಿನ ಪೋಸ್ಟಾಫೀಸು' ಕತೆಗಳನ್ನು ಇಲ್ಲಿ ಗಮನಿಸಲಾಗಿದೆ.

ದೇವನೂರು ಮಹಾದೇವ ಅವರ 'ಡಾಂಬರು ಬಂದುದು' ಕತೆಯಲ್ಲಿ ಆಧುನಿಕತೆಯ ಕೊಡುಗೆಯಾದ ಶಿಕ್ಷಣದ ಸಾಧ್ಯತೆಗಳನ್ನು ಕಾಣಬಹುದು. ಭಾರತದಲ್ಲಿ ಜಾತಿವ್ಯವಸ್ಥೆ ಆಳವಾಗಿ ಬೇರೂರಿದೆ. ಜಾತಿ ವ್ಯವಸ್ಥೆಯನ್ನು ಮೀರುವುದು ಅಸಾಧ್ಯದ ಮಾತು. ಜಾತಿ ಶ್ರೇಣೀಕರಣದಲ್ಲಿ ದಲಿತರ ಸ್ಥಿತಿಗತಿ ಶೋಚನೀಯವಾಗಿದೆ. ಆದರೆ ಆ ಹಳ್ಳಿಯಲ್ಲಿ ಎಂಭತ್ತು ಮನೆಗಳಿವೆ. ಅಲ್ಲಿಯ ಲಕುಮ, ಮಾಧು, ಶಂಭು, ರಾಜಪ್ಪ ಎಂಬ ನಾಲ್ಕು ಹುಡುಗರು ಎಸ್. ಎಸ್. ಎಲ್. ಸಿ. ವರೆಗೆ ಮೈಸೂರಿನಲ್ಲೋ, ನಂಜನಗೂಡಿನಲ್ಲೋ ಓದಿದ್ದಾರೆ. ಮೈಸೂರು, ನಂಜನಗೂಡು ಮುಂತಾದ ನಗರಗಳಲ್ಲಿ ಕೆಲವು ವರ್ಷಗಳ ಕಾಲ ವಾಸ ಮತ್ತು ಶಿಕ್ಷಣದ ಅರಿವನ್ನು ಪಡೆದಿರುವುದರಿಂದ ಜಾತಿವ್ಯವಸ್ಥೆಯ ಬಗ್ಗೆ ನಂಬಿಕೆಗಳಿಲ್ಲ. ಆದುದರಿಂದ ಅವರುಗಳು ಮೇಲುಜಾತಿ ಕೆಳಜಾತಿ ಎಂಬ ಭೇದಭಾವ ಮಾಡದೆ ಹೊಲೆಯರ ಲಕುಮನೊಡನೆ ಒಂದೆ ತಾಯಿಯ ಮಕ್ಕಳಂತೆ ಇದ್ದಾರೆ. ಆದರೆ ಜಾತಿಯ ಮೇಲು ಕೀಲನ್ನು ಪಾಲಿಸುವ ಊರಿನವರು ಅವರುಗಳಿಗೆ ಅವರವರ ತಂದೆಯಿಂದ ಬೈಸಿದ್ದಾರೆ. ಆದರೆ ಇದರ ಬಗ್ಗೆ ತಲೆಕೆಡಿಸಿಕೊಳ್ಳದೆ ಜಾತಿಯ ಮೇಲು ಕೀಳನ್ನು ನಿರಾಕರಿಸಿದ್ದಾರೆ. ಇದಕ್ಕೆ ಕಾರಣ ಶಿಕ್ಷಣ. ಶಿಕ್ಷಣ ಅವರಿಗೆ ಸ್ವಾಭಿಮಾನ ಆತ್ಮವಿಶ್ವಾಸವನ್ನು ನೀಡಿದೆ.

ಊರಿಗೆ ರಸ್ತೆ ಮಂಜೂರಾದಾಗ ಪಟೇಲರೇ ರಸ್ತೆಯ ಕಂಟ್ರಾಕ್ಟ್ ಪಡೆಯುತ್ತಾರೆ. ರಸ್ತೆ ನಿರ್ಮಾಣಕ್ಕೆ ಮಂಜೂರಾದ ಹಣದಲ್ಲಿ ಊರಿನ ದೇವಾಲಯ ಜೀರ್ಣೋದ್ಧಾರ ಮಾಡಲು ನಿರ್ಧರಿಸುತ್ತಾರೆ. ಗುಣಮಟ್ಟದ ರಸ್ತೆ ನಿರ್ಮಾಣ ಮಾಡದೆ ಆ ಹಣವನ್ನು ದುರುಪಯೋಗ ಮಾಡಿಕೊಳ್ಳುತಿದ್ದಾರೆ ಎಂದು ಸರ್ಕಾರಕ್ಕೆ ಮೂಲ ಅರ್ಜಿ ಯನ್ನು ಬರೆಯುತ್ತಾರೆ. ಅವರುಗಳು

ಪಟೇಲನ ಭ್ರಷ್ಟಾಚಾರವನ್ನು ಹೊರತರುತ್ತಾರೆ. ಆ ಯುವಕರು ಪಟೇಲ ಮಾಡುತ್ತಿರುವ ಅನ್ಯಾಯವನ್ನು ಪ್ರಶ್ನಿಸುವ ಧೈರ್ಯ ಮತ್ತು ಆತ್ಮವಿಶ್ವಾಸ ಬರಲು ಅವರು ಪಡೆದಿದ್ದ ಶಿಕ್ಷಣವೇ ಕಾರಣ. ಡಾಂಬರಿನ ಡ್ರಮ್ಮಗಳನ್ನು ಊರಾಚೆ ತೆಗೆದುಕೊಂಡು ಹೋಗಿ ಅದರಲ್ಲಿದ್ದ ಡಾಂಬರನ್ನೆಲ್ಲಾ ಗುಂಡಿಗೆ ಸುರಿದಿರುತ್ತಾರೆ. ಆ ಕೆಲಸವನ್ನು ಮಾಡಿದವರಾರು ಎಂಬುದು ಯಾರಿಗೂ ತಿಳಿದಿಲ್ಲ. ಅದನ್ನು ನೋಡಲು ಇಡೀ ಊರಿನ ಜನ ನೆರೆದಿದ್ದಾರೆ. ರಂಗಪ್ಪನ ಮಗ ಆ ಗುಂಡಿಯಲ್ಲಿ ಬಿದ್ದು ಸಾವು ಬದುಕಿನ ನಡುವೆ ಹೋರಾಡುತ್ತಿದ್ದಾನೆ. ಇದು ಆಧುನಿಕತೆಯ ಇನ್ನೊಂದು ಮುಖವನ್ನು ಪರಿಚಯಿಸುತ್ತದೆ.

ಆ ಊರಿಗೆ ರಸ್ತೆ ಮಂಜೂರಾಗುವ ಮೊದಲು ಊರಿನ ಮುಂಭಾಗದಲ್ಲಿ ಅರಳಿ ಮರಗಳು ನೂರಾರು ವರ್ಷಗಳಿಂದ ಬೆಳೆದು ನಿಂತಿದ್ದವು. ಆ ಮರಗಳ ಮೂಲಕ ಊರನ್ನು ಗುರುತಿಸಲಾಗುತ್ತಿತ್ತು. ಆದರೆ ರಸ್ತೆ ನಿರ್ಮಾಣಕ್ಕಾಗಿ ಅವುಗಳನ್ನು ಕಡಿಯಲಾಯಿತು. ರಸ್ತೆ ನಿರ್ಮಾಣ ಮಾಡಲು ದೊಡ್ಡ ದೊಡ್ಡ ಯಂತ್ರಗಳನ್ನು ಬಳಸಲಾಗುತ್ತಿದೆ. ಎಂದೂ ಆ ಬೃಹತ್ ಯಂತ್ರಗಳನ್ನು ನೋಡದ ಜನ ಕಣ್ಣು ಬಾಯಿಬಿಟ್ಟು ಆಶ್ಚರ್ಯಚಕಿತರಾಗಿ ನೋಡುತ್ತಿದ್ದಾರೆ. ಆದರೆ ಇದರ ಪರಿಣಾಮ ಮಾತ್ರ ಭೀಕರವಾಗಿದೆ. ಪರಿಸರ ನಾಶವಾಗುತ್ತಿದೆ. ವಾಯುಮಾಲಿನ್ಯ ಮತ್ತು ಶಬ್ದಮಾಲಿನ್ಯ ಹೆಚ್ಚಾಗಿದೆ. ಸದಾ ಪ್ರಶಾಂತ ವಾತಾವರಣದಿಂದ ಕೂಡಿದ್ದ ಹಳ್ಳಿ ಮರಗಳ ನಾಶ ಮತ್ತು ಶಬ್ದ ಮತ್ತು ವಾಯು ಮಾಲಿನ್ಯಗಳಿಂದಾಗಿ ಗುರುತಿಸಲಾರದಷ್ಟು ಮಟ್ಟಿಗೆ ಬದಲಾಗಿದೆ.

"ಈಗ ಊರ ಮುಂದಲು ಒಂದು ರಣರಂಗವೇ. ಹಿಂದೆ ನೋಡಿದಷ್ಟೂ ಎತ್ತರಕ್ಕೆ ಹಬ್ಬುತ್ತಿದ್ದ ಅರಳಿಮರಗಳು ಈಗ ನೆಲ ಕಂಡಿವೆ. ಹಿಂದೆ ಸೆಟೆದು ನಿಂತ ಅರಳಿ ಮರಗಳ ಮರೆಯಲ್ಲಿ ಊರ ಕಂಡವರಿಗೆ ಈಗ ಊರು ಭಿಕೋ ಅನ್ನಿಸಲೇ ಬೇಕು. ಅವು ಇದ್ದವು ಅನ್ನುವುದಕ್ಕೆ ಎಲ್ಲೂ ಎಳ್ಳಷ್ಟು ಸುಳಿವು ಕಾಣದು. ಅವು ಇದ್ದಂತಹ ಸ್ಥಳದಲ್ಲಿ ಈಗ ಮಿಷನ್ನು ಓಡಾಡುತ್ತಿದೆ. ಅಳೆತ್ತರದ ಕಲ್ಲುಚಕ್ರದ ಮಿಷನ್ನುಗಳು ಹೊಗೆಬಿಟ್ಟೂ ಓಡಾಡುವ ಚಂದಕ್ಕೆ ಹಳ್ಳಿ ಹೈಕಳೇನು ಗಂಡಸು ಯಾಕೆ ಅನ್ನದೇ ನೋಡುತ್ತಾ ತಮ್ಮ ಮರೆಯುವುದೂ ಉಂಟು. ಅಲ್ಲಿ ಎದ್ದೇಳುವ ಸದ್ದು ಊರ ಮೀರಿ ಆಚೆಗೂ ಹೋಗುವುದು. ದೂರದಿಂದ ನೋಡಿದ ಯಾವ ಮಗನಿಗೂ ಅಲ್ಲೋಲ ಕಲ್ಲೋಲ ಆಗುತ್ತಿರುವಂತೆ ಕಾಣಬೇಕು. ಹತ್ತಿರ ಬಂದರೆ ಅದೇ ಊರಿನ ಜನ. ಅವರೇ ಮಾತನಾಡಿಸಿದರೆ ಅವರೇ ಎಂದು ತಿಳಿಯಬಹುದು. ಹೊರತು ಗುರುತು ಸಿಗದಷ್ಟು ಅವರ ವೇಷ ಬದಲಿಸಿ ಬಿಟ್ಟಿದೆ. ನೆಲಕ್ಕಂಟಿಕೊಂಡ ಕಪ್ಪಾಗಿರುವ ಟಾರಿಗೆ ಅಂಟಿಕೊಂಡು ಅವರು ಮೂಡಿದಂತೆ ಚಲಿಸಿದಂತೆ. "('ಡಾಂಬರು ಬಂದುದು' ಕತೆಯ ಸಾಲುಗಳು)

ಇಂದು ಆಧುನಿಕತೆಯ ಹೆಸರಿನಲ್ಲಿ ಬೃಹತ್ ರಸ್ತೆಗಳು(ಚತುಷ್ಪಥ, ಅಷ್ಟಪಥ), ಕೈಗಾರಿಕೆಗಳು, ಕ್ರೀಡಾ ಮೈದಾನಗಳು ಮುಂತಾದ ಯೋಜನೆಗಳಿಗಾಗಿ ಮರಗಳನ್ನು, ಕಾಡನ್ನು, ಕೃಷಿ ಯೋಗ್ಯ ಭೂಮಿಗಳನ್ನು, ಕೆರೆಕಟ್ಟೆಗಳನ್ನು ನಾಶಮಾಡಲಾಗುತ್ತಿದೆ. ಇದರಿಂದಾಗಿ ಭೂಮಿಯ ತಾಪಮಾನ ಹೆಚ್ಚಾಗುತ್ತಿದೆ, ಪರಿಸರ ಮಾಲಿನ್ಯವಾಗುತ್ತಿದೆ, ಮತ್ತು ಜೀವ ಸಂಕುಲಗಳು ಅಳಿವಿನ ಅಂಚಿಗೆ ಸಾಗುತ್ತಿವೆ. ಉದಾಹರಣೆಗೆ : ದೆಹಲಿಯು ಅತಿಯಾದ ವಾಯುಮಾಲಿನ್ಯದಿಂದ ಕೂಡಿದೆ.

ಪೂರ್ಣಚಂದ್ರ ತೇಜಸ್ವಿ ಅವರ 'ಅಬಚೂರಿನ ಪೋಸ್ಟಾಫೀಸು' ಕತೆಯು ಆಧುನಿಕತೆಯ ಪರಿಣಾಮವನ್ನು ಪರಿಣಾಮಕಾರಿಯಾಗಿ ಬಿಂಬಿಸುತ್ತದೆ. ಅಬಚೂರಿನಲ್ಲಿ

ಹೊಸದಾಗಿ ಆರಂಭವಾದಾಗ ಚೆನ್ನಾಗಿ ಇಂಗ್ಲೀಷ್ ಬಲ್ಲವರು ಯಾರೂ ಆ ಹಳ್ಳಿಗಾಡಿಗೆ ಬರಲು ಸಿದ್ಧರಿರಲಿಲ್ಲ. ಆಗ ಓದಿದ ಮತ್ತು ಅಲ್ಪ ಸ್ವಲ್ಪ ಇಂಗ್ಲೀಷ್ ತಿಳಿದ ಬೋಬಣ್ಣ ಪೋಸ್ಟಾಫೀಸಿನಲ್ಲಿ ಹಂಗಾಮಿ ಪೋಸ್ಟ್ ಮಾಸ್ಟರ್ ಆಗಿ ಕೆಲಸ ಮಾಡುತ್ತಿದ್ದನು. ಅದಕ್ಕೂ ಮೊದಲು ಅಬಚೂರಿನ ಸಾಹುಕಾರರಾದ ಅಲ್ಲಿಜಾನ್ ಸಾಬರ ತೋಟದಲ್ಲಿ ತನ್ನ ಅತ್ತೆ ಮತ್ತು ಹೆಂಡತಿ ಕಾವೇರಿ ಜೊತೆ ತಾನು ಕೆಲಸ ಮಾಡುತಿದ್ದನು. ಓದು ಬರಹ ಬಲ್ಲವನಾಗಿದ್ದರಿಂದ ರೈಟರ್ ಕೆಲಸ ಮಾಡುತಿದ್ದನು. ಬೆಳಗ್ಗೆ ಮತ್ತು ಸಂಜೆ ಒಂದೊಂದು ಗಂಟೆ ಪೋಸ್ಟಾಫೀಸಿನ ಕೆಲಸ ಮಾಡಲು ಒಪ್ಪಿದನು. ಇತನಿಗೆ ಇಂಗ್ಲೀಷ್ ಭಾಷೆ ತಿಳಿಯುತ್ತಿತ್ತು. ಈತನನ್ನು ಬಿಟ್ಟರೆ ಆ ಊರಿನಲ್ಲಿ ಬೇರೆ ಯಾರಿಗೂ ಇಂಗ್ಲೀಷ್ ತಿಳಿಯುತ್ತಿರಲಿಲ್ಲ. ನಂತರ ಪೋಸ್ಟಾಫೀಸು ಬೋಬಣ್ಣನ ಬದುಕಿನ ಭಾಗವಾಯಿತು. ಎಲ್ಲರೂ ಪೋಸ್ಟ್ ಮಾಸ್ಟರೇ ಎಂದು ಗೌರವ ಕೊಡುವುದನ್ನು ಕೇಳಿ ಸಂತೋಷಪಡುತಿದ್ದನು. ದಿಲ್ಲಿಯಯೊಂದಿಗೆ ಸಂಪರ್ಕ ಹೊಂದಿದ ಏಕೈಕ ಭಾರತದ ವ್ಯಕ್ತಿ ಎಂಬ ಹೆಮ್ಮೆ ಇತ್ತು ಆತನಿಗೆ.

ಪೋಸ್ಟಾಫೀಸು ಬರುವ ಮೊದಲು ತನ್ನ ಅತ್ತೆ, ಹೆಂಡತಿ ಮಕ್ಕಳೊಂದಿಗೆ ನೆಮ್ಮದಿಯಿಂದ ಬೋಬಣ್ಣ ಇದ್ದನು. ಆದರೆ ಪೋಸ್ಟಾಫೀಸು ಬಂದ ನಂತರ ಸಂಕಟಗಳಿಗೆ ಗುರಿಯಾದನು. ತನ್ನ ಈ ಸಂಕಟಗಳಿಗೆ ಕಾರಣ ಏನು ಎನ್ನುವುದು ತಿಳಿಯದಾಯಿತು. ಓದಿದವನಾದ್ದರಿಂದ ಬೋಬಣ್ಣನಿಗೆ ತಿಳುವಳಿಕೆ ಇತ್ತು. ಆದರೆ ನಂತರ ಬೇರೆಯವರ ಪತ್ರಗಳನ್ನು ಕದ್ದು ಓದುವುದು, ಮನಿಯಾರ್ಡರ್ ಹಣವನ್ನು ಬಳಸಿಕೊಳ್ಳುವುದನ್ನು ಮಾಡಿದನು. ಆತ ಅಲ್ಲೀಜಾನ್ ಸಾಬರ ಮಗನಿಗೆ ಬಂದ ಪತ್ರವನ್ನು ಕದ್ದಿದ್ದನು. ಆದ್ದರಿಂದ ಪೋಸ್ಟಾಫೀಸಿಗೆ ಸಂಬಂಧಿಸಿದ ಯಾವುದೋ ದೆವ್ವವೋ ದೇವರೋ ಕಾಡುತ್ತಿರಬೇಕೆಂದು ಭಾವಿಸಿದನು. ಬೋಬಣ್ಣ ಅಲ್ಲೀಜಾನ್ ಸಾಬರ ಮಗ ಅಜೀಜ್‌ನಿಗೆ ಬಂದ ಪತ್ರವನ್ನು ಕೊಡದೆ ತನ್ನ ಬಳಿಯೇ ಇಟ್ಟುಕೊಂಡಿದ್ದನು. ಅಜೀಜ್ ಮಂಗಳೂರಿನಲ್ಲಿ ಓದುತಿದ್ದನು. ಆತ ರಜಕ್ಕೆ ಊರಿಗೆ ಬಂದಾಗ ಪತ್ರ ಬಂದಿತ್ತು. ಅದರೊಳಗೆ ಏನಿರಬಹುದು, ಪ್ರೇಮಪತ್ರವಿರಬಹುದೆ? ಎಂಬ ಅನುಮಾನವಿತ್ತು. ಬೋಬಣ್ಣನಿಗೆ ಪ್ರೇಮಪತ್ರ ಓದಿರಲಿಲ್ಲ ಮತ್ತು ಪ್ರೇಮಸಲ್ಲಾಪವನ್ನು ಕೇಳಿರಲಿಲ್ಲ. ಹಿರಿಯರು ಮತ್ತು ಸಂಪ್ರದಾಯಬದ್ಧರಾದ ಅತ್ತೆ ಮನೆಯಲ್ಲಿ ಇದ್ದಾಗ ಹೆಂಡತಿಯೊಂದಿಗೆ ಅದೂ ಸಾಧ್ಯವು ಇರಲಿಲ್ಲ. ಹೆಂಡತಿಯ ನಗ್ನತೆ ಅರಿವಿತ್ತೆ ವಿನಃ ನೋಡಿರಲಿಲ್ಲ. ಆ ಪತ್ರವನ್ನು ಕೊಡದೆ ತನ್ನಲ್ಲೆ ಇಟ್ಟುಕೊಂಡನು ಮತ್ತು ಅದನ್ನು ತೆರೆದು ನೋಡದೆ, ಅದರೋಳಗೆ ಏನಿರಬಹುದು ಎಂಬ ಗೊಂದಲದಲ್ಲಿಯೇ ದಿನಗಳನ್ನು ಕಳೆದನು. ಇಷ್ಟು ದಿನಗಳ ನಂತರ ಈಗ ಪತ್ರವನ್ನು ಕೊಟ್ಟರೆ ಅನುಮಾನಬರಬಹುದೆಂದು ಪತ್ರವನ್ನು ಕೊಡದೆ ತನ್ನ ಬಳಿಯೇ ಇಟ್ಟುಕೊಂಡು ದಿನದೂಡುತ್ತಾನೆ. ಒಂದು ದಿನ ತೆರೆದು ನೋಡಿದಾಗ ಅದರಲ್ಲಿ ಸೊಂಟದವರೆಗೂ ನಗ್ನಳಾದ ಹೆಣ್ಣಿನ ಚಿತ್ರವಿರುತ್ತದೆ. ಅವಳ ಕೆಂಪು ಶರೀರ ದುಂಡನೆಯ ಕುಚಗಳು ದೊರೆಸಾನಿಯಂತಹ ಮುಖವನ್ನು ನೋಡಿ ಅಚ್ಚರಿಯಾಗುತ್ತದೆ. ಆ ಚಿತ್ರವನ್ನು ತನ್ನ ಬಳಿಯಲ್ಲಿಯೇ ಇಟ್ಟುಕೊಂಡು ನೋಡುತ್ತಿರುತ್ತಾನೆ. ಇದರಿಂದಾಗಿ ಆತ ಯಾವುದೇ ತಪ್ಪುಗಳನ್ನು ಮಾಡುವುದಿಲ್ಲ. ಆದರೆ ತನ್ನ ಹೆಂಡತಿಯನ್ನು ನೋಡಿದಾಗ ಆತ ಸ್ತ್ರೀಯ ನಗ್ನ ಸ್ವರೂಪದ ಅನಂತ ಸಾಧ್ಯತೆಗಳನ್ನು ಕಲ್ಪಿಸಿಕೊಳ್ಳುತ್ತಿದ್ದನು. ಅವಳೊಂದಿಗೆ ಚೆಲ್ಲು ಚೆಲ್ಲಾಗಿ ವರ್ತಿಸುತ್ತಾ ಚೇಷ್ಟೆಗಳನ್ನು ಮಾಡುತ್ತಿದ್ದನು. ಇದರಿಂದಾಗಿ ಕಾವೇರಿ ಮುಜುಗರವನ್ನು ಅನುಭವಿಸುವಂತಾಯ್ತು ಮತ್ತು ತನ್ನ ತಾಯಿಯಿಂದ ಮಾತುಗಳನ್ನು ಕೇಳಬೇಕಾಯ್ತು. ಬೋಬಣ್ಣ ಊರಿನ ಜನರೊಂದಿಗೆ ಪತ್ರಗಳ ವಿಷಯಗಳನ್ನು ಮಾತಾಡುತ್ತಾ ಊರಿನಲ್ಲಿ ಕಲುಷಿತ ವಾತಾವರಣ ನಿರ್ಮಾಣವಾಗುತ್ತದೆ. ಬೇರೆಯವರ ವೈಯಕ್ತಿಕ ವಿಷಯಗಳನ್ನು

ಚರ್ಚಿಸಬಾರದು ಎಂಬ ವಿವೇಕವಿಲ್ಲದೆ ವರ್ತಿಸುತ್ತಾನೆ. ಬೇಲಾಯುಧನ ಮಗಳು ಪದ್ದಿಯನ್ನು ಕುರಿತಾಗಿ ಪತ್ರವೊಂದು ಬಂದಾಗ, ಈತನ ವಿವೇಕವಿಲ್ಲದ ವರ್ತನೆಯಿಂದಾಗಿ ಸಂಕಷ್ಟಕ್ಕೆ ಗುರಿಯಾಗುತ್ತಾನೆ. ಆತನ ಪರವಾಗಿ ಅತ್ತೆ, ಹೆಂಡತಿ ಮಾತನಾಡುವುದಿಲ್ಲ. ಮತ್ತು ಅವನೊಂದಿಗೆ ಕುಳಿತು ಮಾತನಾಡಿದವರು ಸಹ ಅವನ ಬಗೆಗೆ ಅನುಮಾನಪಡುತ್ತಾರೆ. ಇದರಿಂದಾಗಿ ಬೇಸತ್ತು ಎಲ್ಲರಿಂದ ದೂರ ಹೋಗುತ್ತಾನೆ. ಆತನ ಸಂಸಾರದ ನೆಮ್ಮದಿ ನಾಶವಾಗುತ್ತದೆ. ಇದಕ್ಕೆ ಕಾರಣ ಏನು ಎನ್ನುವುದು ಗೊತ್ತಾಗುವುದೇ ಇಲ್ಲ.

ಹೀಗೆ ಆಧುನಿಕತೆಯ ಪ್ರವೇಶ ಕುಟುಂಬ ಮತ್ತು ಸಮಾಜದ ನೆಮ್ಮದಿ, ಶಾಂತಿಯ ವಾತಾವರಣವನ್ನು ಕೆಡಿಸುತ್ತಿದೆ. ಪರಿಸರವನ್ನು ನಾಶಮಾಡುತ್ತಿದೆ. ಅಷ್ಟೇ ಅಲ್ಲದೇ ಮನುಷ್ಯ ಸಂಬಂಧಗಳ ನಡುವೆ ಬಿರುಕುಗಳನ್ನು ಗುರುತಿಸಬಹುದಾಗಿದೆ. ಇಷ್ಟೇ ಅಲ್ಲದೆ ಪಂಜೆ ಮಂಗೇಶರಾಯರ 'ಕಮಲಾಪುರದ ಹೊಟ್ಲಿನಲ್ಲಿ', ಪೂರ್ಣಚಂದ್ರ ತೇಜಸ್ವಿ ಅವರ 'ತುಕ್ಕೋಜಿ', ಅಮರ ನುಡ್ರುಗೋಣಿ ಅವರ 'ಏ ದಿಲ್ ಮಾಂಗೇ ಮೋರ್' ಮುಂತಾದ ಕತೆಗಳನ್ನು ಗಮನಿಸಬಹುದು.

**ಪರಾಮರ್ಶನ ಗ್ರಂಥಗಳು:**

1. ಆಧುನಿಕತೆ ಮತ್ತು ಕನ್ನಡ ಸಾಹಿತ್ಯ ಪ್ರಕಾರಗಳು – ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
2. ಕನ್ನಡ ಸಣ್ಣಕಥೆಗಳು– ನ್ಯಾಷನಲ್ ಬುಕ್ ಟ್ರಷ್ಟ್ ಇಂಡಿಯಾ
3. ಸಂಶೋಧನೆ ತಾತ್ವಿಕ ಆಯಾಮಗಳು–ಕನ್ನಡ ವಿಶ್ವವಿದ್ಯಾಲಯ ಹಂಪಿ
4. ದೇಶಿಶಿಕ್ಷಣ ಮತ್ತು ಜಾಗತೀಕರಣ–ಡಾ. ರಾಜೇಂದ್ರ ಚೆನ್ನಿ
5. ದ್ಯಾವನೂರು –ದೇವನೂರು ಮಹಾದೇವ
6. ಅಬಚೂರಿನ ಪೋಸ್ಟಾಫೀಸು– ಪೂರ್ಣಚಂದ್ರ ತೇಜಸ್ವಿ

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4. 0 International License.